ಮಾತುಕತೆ

# ಕವಿತೆಯೆಂದರೆ ದುಷ್ಟಶಕ್ತಿಗಳಿಗೆ ಕೊಡುವ ಶಾಪ

## ಹಿಂದಿಯ ಪ್ರಸಿದ್ಧ ಕವಿ ಅರುಣ್ ಕಮಲ್ ಸಂದರ್ಶನ



**ವಿಕ್ರಮ ವಿಸಾಜಿ**

ಅರುಣ್ ಕಮಲ್ (1954) ಹಿಂದಿಯ ಪ್ರಸಿದ್ಧ ಕವಿ, ಲೇಖಕ ಮತ್ತು ಸಂಪಾದಕರು. ಹುಟ್ಟಿದ್ದು ಬಿಹಾರಿನ ರೊಹತಾಸ್ ಜಿಲ್ಲೆಯ ನಾಸಿರ್‌ಗಂಜ್‌ನಲ್ಲಿ. ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಪಟ್ನಾಗೆ ಪಯಣ. ಅಲ್ಲಿನ ವೈಚಾರಿಕ ವಾತಾವರಣದಲ್ಲಿ ಕವಿಯಾಗಿ ಬೆಳೆದುನಿಂತರು. ಮುಂದೆ ಪಟ್ನಾ ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿ, ಮುಖ್ಯಸ್ಥರಾಗಿ ಕಾರ್ಯ ನಿರ್ವಹಣೆ. ಮೊದಲ ಕವನ ಸಂಕಲನ 'ಅಪನಿ ಕೇವಲ್ ಧಾರ್' ಪ್ರಕಟವಾದದ್ದು 1980ರಲ್ಲಿ. ನಂತರ ಹಿಂದಿ ಸಾಹಿತ್ಯ ಜಗತ್ತಿನಲ್ಲಿ ತಮ್ಮ ಮಾನವೀಯ, ತಣ್ಣನೆಯ ಹಾಗೂ ಹರಿತವಾದ ಶೈಲಿಯ ಮೂಲಕ ಜನಪ್ರಿಯರಾದರು. ದೈನಂದಿನ ಆಗುಹೋಗುಗಳಿಗೆ, ಮನುಷ್ಯರ ನಡುವಿನ ಸಂಕೀರ್ಣ ಸಂಬಂಧಗಳಿಗೆ, ಕ್ಲಿಷ್ಟವಲ್ಲದ ಆದರೆ ಗಹನವಾದ ರಚನೆಗಳಿಗೆ ಹೆಸರುವಾಸಿ. ಆಳದಲ್ಲಿ ಹರಿಯುವ ರಾಜಕೀಯ ಪ್ರಜ್ಞೆ ಅವರನ್ನು ಪ್ರಗತಿಶೀಲ ಕವಿಗಳ ಗುಂಪಿನಾಚೆಗೂ ಒಯ್ದು ನಿಲ್ಲಿಸಿತು. 'ಸಬೂತ್', 'ನಯೇ ಇಲಾಕೆ ಮೇ', 'ಪುತಲಿ ಮೇ ಸಂಸಾರ', 'ಮೈ ವೋ ಶಂಖ್ ಮಹಾಶಂಖ್', 'ಯೋಗ್‌ಫಲ್' ಅವರ ಕವಿತಾ ಸಂಗ್ರಹಗಳು. 'ಕವಿತಾ ಔರ್ ಸಮಯ್', 'ಗೋಲ್‌ಮೇಜ್' ವಿಮರ್ಶಾ ಕೃತಿಗಳು. ಮಾಯಕೊವಸ್ಕಿಯ ಆತ್ಮಕತೆಯನ್ನು ಹಿಂದಿಗೆ ಅನುವಾದಿಸಿದ್ದಾರೆ. ವಿಯೆಟ್ನಾಂನ ಕವಿ ತೋಹು ಅವರ ಕವಿತೆ ಮತ್ತು ಟಿಪ್ಪಣಿಗಳನ್ನು ಹಿಂದಿಗೆ ತಂದಿರುವರು. ಆರು ವರ್ಷಗಳ ಕಾಲ ಹಿಂದಿಯ ಪ್ರಸಿದ್ಧ ಸಾಹಿತ್ಯ ಪತ್ರಿಕೆ 'ಆಲೋಚನಾ'ದ ಸಂಪಾದಕರಾಗಿ ದುಡಿದರು. ಅನೇಕ ದೇಶ ವಿದೇಶಗಳ ವಿಚಾರ ಸಂಕಿರಣ ಮತ್ತು ಕವಿಗೋಷ್ಠಿಗಳಲ್ಲಿ ಭಾಗಿ. 1998ರಲ್ಲಿ ಅವರ 'ನಯೇ ಇಲಾಕೆ ಮೇ' ಕವನ ಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪುರಸ್ಕಾರ. 2024ರ ಫೆಬ್ರುವರಿ 21ರಂದು 'ಮಾತೃಭಾಷೆಯ ದಿನ'ದ ಅಂಗವಾಗಿ ಕಲಬುರಗಿಯ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಒಂದು ವಾರ ಸನ್ನತಿ, ಕಲಬುರಗಿ, ಬಸವಕಲ್ಯಾಣ ಮತ್ತು ಹಂಪಿಯ ತಿರುಗಾಟ. ಈ ಹೊತ್ತಿನಲ್ಲಿ ನಡೆಸಿದ ಸಂದರ್ಶನ.